ಸಾಮಾನ್ಯವಾಗಿ ಮಾರುಕಟ್ಟೆ ಪ್ರದೇಶಗಳಲ್ಲಿ, ಕಸದ ರಾಶಿ ಇರುವೆಡೆಯಲ್ಲಿ, ಆಹಾರದ ತ್ಯಾಜ್ಯ ಇರುವಲ್ಲಿ ಕಾಗೆಗಳು ಇರುತ್ತವೆ. ಗುಡ್ಡ–ಬೆಟ್ಟಗಳಲ್ಲಿ, ಕಾಡುಗಳಲ್ಲಿ, ಉದ್ಯಾನಗಳಲ್ಲಿ, ಸಮುದ್ರ ತೀರದ ಮರಗಳಲ್ಲಿ ತಮ್ಮ ಗೂಡುಗಳನ್ನು ಕಟ್ಟಿಕೊಳ್ಳುತ್ತವೆ. ಪ್ರಪಂಚದ ಯಾವುದೇ ಸ್ಥಳಕ್ಕೆ ಹೋದರೂ ಅಲ್ಲಿ ಕಾಗೆಯ ಸಂತತಿ ಇರುತ್ತದೆ. ಅಂತೂ ಕಾಗೆ ಸರ್ವವ್ಯಾಪಿ ಪಕ್ಷಿ ಎಂದಾಯಿತು. ಹಾಗಾಗಿಯೇ ಇರಬೇಕು, ಶ್ರಾದ್ಧ ಮಾಡಿದ ಅನಂತರ ಕಾಕಪಿಂಡ ಅಥವಾ ಉಚ್ಚಿಷ್ಟ ಪಿಂಡ ಅಂತ ಹೊರಗೆಲ್ಲಾದರೂ ಆಹಾರವನ್ನಿಟ್ಟು, ಬೇರೆ ಯಾವುದೇ ಪ್ರಾಣಿ, ಪಕ್ಷಿಗಳನ್ನು ಕರೆಯದೆ ಕಾಗೆ(ವಾಯಸ)ಯನ್ನೇ ಕರೆಯುತ್ತಾರೆ. ಪಿತೃಗಳು ಕಾಗೆಯ ರೂಪದಲ್ಲಿ ಬಂದು ಆಹಾರ ಸ್ವೀಕರಿಸುತ್ತಾರೆ ಅನ್ನೋ ನಂಬಿಕೆಯೂ ಇದೆ. ಒಂದು ಬಾರಿ ನನ್ನ ಸಂಬಂಧಿಕರ ಮನೆಯಲ್ಲಿ ಹಿರಿಯರೊಬ್ಬರು ತೀರಿಹೋಗಿದ್ದರು. ಶ್ರಾದ್ಧ ಮಾಡಿದ ಅನಂತರ ಹೊರಗೆ ಕಾಕಪಿಂಡವನ್ನಿಟ್ಟು ಕಾಗೆಯನ್ನು ಕರೆದರೆ, ಅವರ ದುರಾದೃಷ್ಟಕ್ಕೆ ಆ ದಿನ ಒಂದೂ ಕಾಗೆ ಬರಲಿಲ್ಲವಂತೆ. ಯಾವಾಗಲೂ ಕಾಗೆಗಳು ಬರುತ್ತಿದ್ದ ಜಾಗವದು. ಆ ದಿನ ಎಷ್ಟು ಹೊತ್ತು ಕಾದರೂ ಕಾಗೆ ಬರಲಿಲ್ಲ. ಕಾಗೆ ಬಂದು ಪಿಂಡ ತಿನ್ನದೆ ಅವರು ಊಟ ಮಾಡುವ ಹಾಗಿರಲಿಲ್ಲ. 'ಕಾವ್...ಕಾವ್...' ಎಂದು ಕರೆದು ಕರೆದು ಕೊನೆಗೆ ಅವರ ಗಂಟಲು ಒಣಗಿ ಧ್ವನಿ ಕಾಗೆಯ ಕರ್ಕಶ ಧ್ವನಿಯಂತಾಗಿಬಿಟ್ಟಿತು! ಒಳ್ಳೇ ಪೇಚಾಟಕ್ಕಿಟ್ಟುಕೊಂಡಿತು ಅವರಿಗೆ! ಕೊನೆಗೆ ಏನು ಮಾಡಿದರೋ ತಿಳಿಯಲಿಲ್ಲ. ಮತ್ತೊಬ್ಬರ ಮನೆಯಲ್ಲಿ ಸತ್ತವರ ಆತ್ಮೀಯರೊಬ್ಬರು ಶ್ರಾದ್ಧಕ್ಕೆ ಹೋಗಲಾಗಿರಲಿಲ್ಲ. ಅಂದು ಪಿಂಡವಿಟ್ಟರೂ ಕಾಗೆ ಬರಲೊಲ್ಲದು! ಮನೆಯವರು ಎಲ್ಲರ ಹೆಸರು ಹೇಳಿ ಹೇಳಿ ಕಾಗೆಯನ್ನು ಕರೆದರೂ ಅದು ಬರಲೇ ಇಲ್ಲವಂತೆ! ಕೊನೆಗೆ ಆ ಆತ್ಮೀಯರ ಹೆಸರು ಹೇಳಿದ ಸ್ವಲ್ಪ ಹೊತ್ತಿನಲ್ಲೇ ಕಾಗೆ ಬಂದು ಆಹಾರವನ್ನು ಸ್ವೀಕರಿಸಿತು. ವಿಚಿತ್ರವಾದರೂ ಸತ್ಯ ಅಲ್ಲವೇ? ಕೆಲವು ಕಡೆ ಇಟ್ಟ ಪಿಂಡವನ್ನು ಕಾಗೆಯೇ ಬಂದು ತಿಂದಿರುವುದಿಲ್ಲ. ಅದರ ಬದಲು ಇನ್ಯಾವ ಪಕ್ಷಿಯೋ, ಅಳಿಲೋ, ಹಳ್ಳಿಗಳಲ್ಲಾದರೆ ಮಂಗವೋ ಬಂದು ತಿಂದುಹೋಗಿರುತ್ತದೆ.

ಈಗಂತೂ ಬೇರೆ ಪಕ್ಷಿಗಳಂತೆ ಕಾಗೆಗಳು ಕಾಣುವುದೇ ಅಪರೂಪವಾಗಿದೆ. ಮನುಷ್ಯರ ದುರಾಸೆ ನೋಡಿ ಅವುಗಳಿಗೂ ಬೇಸರ ಬಂದಿರಬೇಕು. ತಮ್ಮ ಜಗತ್ತೇ ಸುಂದರ, ನಿಮ್ಮ ಜಗತ್ತು ನಿಮಗೇ ಇರಲಿ ಎಂದು ಅವು ಅಂದುಕೊಂಡಿರಬೇಕು. ಆದರೂ ಊರೆಂದ ಮೇಲೆ ಕಾಗೆಗಳಿರಲೇಬೇಕು. ಏಕೆಂದರೆ, ಅವುಗಳಿದ್ದರೆ ಊರು, ಪರಿಸರ ಸ್ವಚ್ಛವಾಗಿರುತ್ತದೆ. ಅಂದರೆ, ಸ್ವಚ್ಛ ಅಭಿಯಾನದಲ್ಲಿ ಅವುಗಳ ಪಾಲೂ ಇದೆ. ನೀವೇನಂತೀರಾ?


### ಅರುಣಾ ಕೆ.ಆರ್.

ಶೃಂಗೇರಿಯವರಾದ ಅರುಣಾ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ., ಜೈನ್ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಪದವಿ ಪಡೆದಿದ್ದಾರೆ. ಕನ್ನಡ ಮತ್ತು ಅಪಭ್ರಂಶ ಭಾಷೆಗಳಲ್ಲಿ ಹತ್ತನೇ ಶತಮಾನದ ಜೈನ ಕಾವ್ಯಗಳ ಬಗ್ಗೆ ತೌಲನಿಕ ಸಂಶೋಧನಾ ಅಧ್ಯಯನ ಮಾಡಿ ಜೈನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಶಾಂತಿನಾಥ ಕವಿಯ 'ಸುಕುಮಾರ ಚರಿತೆ'ಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. 'ನನ್ನೊಳಗಿನ ಮಲೆನಾಡು' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.